# ಆನೆ ಸಾಕುವ ‘ಸುಖ’!

ವನ್ಯಜೀವಿಗಳಾಗಿರುವ ಆನೆಗಳು ರಾಷ್ಟ್ರೀಯ ಆಸ್ತಿ ಎಂದು ಘೋಷಿಸಲಾಗಿದ್ದರೂ ದೇಶದಲ್ಲಿ ಈಗಲೂ ಸಾವಿರಾರು ಆನೆಗಳು ಖಾಸಗಿ ಒಡೆತನದಲ್ಲಿವೆ. ಆನೆಗಳ ಖಾಸಗಿ ಒಡೆತನದಲ್ಲಿ ಕೇರಳದ್ದೇ ಸಿಂಹಪಾಲು. ಅಂಡಮಾನ್ ನಿಕೋಬಾರ್ ದ್ವೀಪಗಳ ಟಿಂಬರ್ ಯಾರ್ಡ್‌ಗಳಲ್ಲಿ ಸೆರೆ ಹಿಡಿದ ಆನೆಗಳನ್ನು ಹೆಚ್ಚಾಗಿ ಬಳಕೆ ಮಾಡಲಾಗುತ್ತಿತ್ತು. ಬೇರೆಡೆಗೆ ಹೋಲಿಸಿದರೆ ಕರ್ನಾಟಕದಲ್ಲಿ ಖಾಸಗಿ ಒಡೆತನದಲ್ಲಿರುವ ಆನೆಗಳ ಪ್ರಮಾಣ ಕಡಿಮೆ. ನಮ್ಮ ಮೈಸೂರಿನ ಒಡೆಯರ ಸುಪರ್ದಿಯಲ್ಲಿ ಏಳು ಆನೆಗಳಿವೆ. ಖಾಸಗಿ ದರ್ಬಾರ್‌ಗೆ ಅವುಗಳನ್ನು ಬಳಕೆ ಮಾಡಲಾಗುತ್ತದೆ. ಈ ಆನೆಗಳ ನೀರಾಟಕ್ಕೆ ಅರಮನೆಯ ಆವರಣದಲ್ಲೇ ಕೃತಕ ಕೆರೆಯನ್ನು ನಿರ್ಮಾಣ ಮಾಡಲಾಗಿದೆ.

ಕೆಲವು ಆನೆಗಳ ಮಾಲೀಕರು ಅವುಗಳನ್ನು ನಿತ್ಯ ಭಿಕ್ಷೆ ಬೇಡಲು ಅಟ್ಟುತ್ತಾರೆ. ಈ ದೈತ್ಯಪ್ರಾಣಿಗಳು ಸಂತೆಗಳಲ್ಲಿ ಜನರು ಕೊಡುವ ಬಿಡಿಗಾಸಿಗಾಗಿ ಅಂಡಲೆಯಬೇಕಿದೆ. ಕೇರಳದಲ್ಲಿ ಆನೆಗಳ ಒಡೆಯರು ಅವುಗಳನ್ನು ಪಳಗಿಸಲು ಕಾಲುಗಳಿಗೆ ಸರಪಳಿ ಕಟ್ಟಿ, ಚಿತ್ರಹಿಂಸೆ ಕೊಡುತ್ತಿರುವ ಆರೋಪಗಳಿವೆ. ಹೊಟ್ಟೆ ತುಂಬ ಊಟ ನೀಡುತ್ತಿಲ್ಲ ಎನ್ನುವ ದೂರುಗಳಿವೆ. ಆನೆಗಳ ಒಡೆತನದ ಪತ್ರ ಹೊಂದಿದವರು ಅದನ್ನು ಮಾರಾಟ ಮಾಡದಂತೆ ನಿರ್ಬಂಧ ಇದೆಯಾದರೂ ಲಕ್ಷ ರೂಪಾಯಿಯಿಂದ ಕೋಟಿ ರೂಪಾಯಿವರೆಗೆ ಅವುಗಳಿಗೆ ಬೆಲೆಕಟ್ಟಿ ಮಾರುವ ದಂಧೆ ಮಾತ್ರ ಎಗ್ಗಿಲ್ಲದೆ ನಡೆದಿದೆ.

ಒಡೆತನದ ಪ್ರಮಾಣಪತ್ರವಿಲ್ಲದೆ ಆನೆಗಳನ್ನು ಸುಪರ್ದಿಯಲ್ಲಿ ಇಟ್ಟುಕೊಳ್ಳುವುದು ವನ್ಯಜೀವಿ ಸಂರಕ್ಷಣೆ ಕಾಯ್ದೆ–1972 ಪ್ರಕಾರ ಅಪರಾಧ. ದೇಶದಲ್ಲಿ ಸುಮಾರು ಮೂರು ಸಾವಿರ ಆನೆಗಳು ಖಾಸಗಿಯವರ ಸುಪರ್ದಿಯಲ್ಲಿವೆ ಎಂಬ ಅಂದಾಜಿದೆ. ಆದರೆ, ಸಾವಿರಾರು ಆನೆಗಳನ್ನು ಕಾಯ್ದೆಬದ್ಧ ಪ್ರಮಾಣಪತ್ರ ಇಲ್ಲದೆ ಹಾಗೇ ಇಟ್ಟುಕೊಳ್ಳಲಾಗಿದೆ.

ಕೇರಳದಲ್ಲಿ ಆನೆಗಳು ದೇವಾಲಯ ಸಂಸ್ಕೃತಿಯ ಭಾಗವಾಗಿವೆ. ತ್ರಿಶ್ಶೂರ್‌ನ ಪೂರಮ್ ಉತ್ಸವದಲ್ಲಿ ಆನೆಗಳೇ ಪ್ರಧಾನ ಆಕರ್ಷಣೆ. ಗುರುವಾಯೂರು ದೇವಸ್ಥಾನವೊಂದರಲ್ಲೇ 60 ಆನೆಗಳಿವೆ. ಅಲ್ಲಿನ ಪ್ರಮುಖ ದೇವಸ್ಥಾನಗಳು ಸ್ವತಂತ್ರ ಗಜಪಡೆಯನ್ನೇ ಹೊಂದಿವೆ. ಆದರೆ, ಬಹುತೇಕ ದೇವಾಲಯಗಳು ಒಡೆತನದ ಪ್ರಮಾಣ ಪತ್ರವನ್ನೇ ಹೊಂದಿಲ್ಲ. ಒಡೆತನದ ಪ್ರಮಾಣಪತ್ರ ಇಲ್ಲದೆ ಆನೆಯನ್ನು ಇಟ್ಟುಕೊಂಡರೆ ಏಳು ವರ್ಷ ಸಜೆ ಹಾಗೂ 25 ಸಾವಿರ ರೂಪಾಯಿ ದಂಡ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಆನೆಗಳ ರಕ್ಷಣೆಗೆ ಕಾಯ್ದೆಗಳು ಬೇಕಾದಷ್ಟಿದ್ದರೂ ಅವುಗಳು ಬಳಕೆಯಾಗುತ್ತಿಲ್ಲ ಎನ್ನುವುದು ಪ್ರಾಣಿಗಳ ಹಕ್ಕುಗಳಿಗಾಗಿ ಹೋರಾಡುತ್ತಿರುವ ಪೇಟಾ ಸಂಘಟನೆಯ ದೂರು.

ಕೇರಳದ ತುಂಬಾ ನಡೆಯುವ ಉತ್ಸವಗಳಿಗೆ ಆನೆಗಳನ್ನು ಬಾಡಿಗೆಗೆ ಕೊಟ್ಟು ಹಣ ಮಾಡುವ ದಂಧೆ ವ್ಯವಸ್ಥಿತವಾಗಿ ಬೆಳೆದಿದೆ. ಮೆರವಣಿಗೆಯಲ್ಲಿ ಬ್ಯಾಂಡ್ ಮೇಳದೊಂದಿಗೆ ದಿನಗಟ್ಟಲೆ ಮೌನವಾಗಿ ಈ ಆನೆಗಳು ಹೆಜ್ಜೆ ಹಾಕಬೇಕಾಗುತ್ತದೆ. ಹೊತ್ತಿಗೆ ಸರಿಯಾಗಿ ಊಟ ಕೂಡ ಸಿಗುವುದಿಲ್ಲ. ಲಾರಿಗಳಲ್ಲಿ ಮೈ ಕುಗ್ಗಿಸಿಕೊಂಡು ಇಲ್ಲವೆ ಟಾರಿನಲ್ಲಿ ಕಾಲು ಸುಡಿಸಿಕೊಳ್ಳುತ್ತಾ ಇವುಗಳು ಊರಿಂದೂರಿಗೆ ಅಲೆಯಬೇಕಿದೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ, ತಾವು ದರ್ಶನ ಪಡೆಯಲು ಹೋದ ದೇವಸ್ಥಾನಕ್ಕೆಲ್ಲ ಆನೆಯನ್ನು ಅರ್ಪಿಸುವುದು ವಾಡಿಕೆಯಾಗಿತ್ತು. ತಮ್ಮ ರಾಜಕೀಯ ಬದುಕಿನಲ್ಲಿ ಎದುರಾಗಿದ್ದ ದೈತ್ಯ ಸಮಸ್ಯೆಗಳನ್ನು ದೇವರು ಪರಿಹರಿಸಬೇಕಾದರೆ ಇಂತಹ ‘ದೊಡ್ಡ ಕಾಣಿಕೆ’ಯನ್ನೇ ಕೊಡಬೇಕು ಎಂದು ಅವರು ಭಾವಿಸಿದ್ದರೇನೋ!

ಆನೆಯೊಂದು ಪ್ರತಿದಿನ 150ರಿಂದ 200 ಕೆ.ಜಿ.ಯಷ್ಟು ಮೇವು ತಿನ್ನುತ್ತದೆ. ಅದಕ್ಕೆ 200 ಲೀಟರ್‌ಗಳಷ್ಟು ನೀರು ಬೇಕು. ಹೀಗಾಗಿ ಅವುಗಳನ್ನು ಸಾಕುವುದು ಸುಲಭದ ಕೆಲಸವಲ್ಲ. ಆನೆಯ ಹೊಟ್ಟೆ ತುಂಬಿಸಲು ಪ್ರತಿದಿನ ಜೇಬು ತುಂಬಿಸಿಕೊಂಡೇ ನಿಂತಿರಬೇಕು. ಇಷ್ಟೊಂದು ದುಬಾರಿ ಬಾಬತ್ತಿನ ಕೆಲಸ ಇದಾಗಿದ್ದರಿಂದಲೇ ಹೆಚ್ಚಿನ ಹಣ ವ್ಯಯಿಸುವ ಇಲಾಖೆಗಳು ಹಾಗೂ ಅಲ್ಲಿನ ಅಧಿಕಾರಿಗಳನ್ನು ‘ಬಿಳಿಯಾನೆ’ಗಳು ಎಂದು ವ್ಯಂಗ್ಯವಾಗಿ ಕರೆಯಲಾಗುತ್ತದೆ.

ಗದ್ದೆ–ತೋಟಗಳಿಗೆ ನುಗ್ಗುತ್ತವಂತೆ. ಈ ಹೇಳಿಕೆಗಳಿಗೆ ಪುಷ್ಟಿ ನೀಡುವಂತಹ ಘಟನೆಯನ್ನೂ ವನ್ಯಜೀವಿತಜ್ಞರು ನೆನೆಯುತ್ತಾರೆ. ಕೆಲವು ವರ್ಷಗಳ ಹಿಂದೆ ಆಲೂರಿನ ಭತ್ತದ ಗದ್ದೆಗೆ ಎರಡು ಗಂಡಾನೆಗಳು ನುಗ್ಗಿದ್ದವು. ಅವುಗಳನ್ನು ಸೆರೆ ಹಿಡಿದಿದ್ದ ಅರಣ್ಯ ಇಲಾಖೆಯ ಸಿಬ್ಬಂದಿ ಅವುಗಳನ್ನು ಮದುಮಲೈ ಕಾಡಿನಲ್ಲಿ ಬಿಟ್ಟಿದ್ದರು. ಕೆಲವೇ ದಿನಗಳ ಬಳಿಕ ಆ ಆನೆಗಳು ಮತ್ತೆ ಆಲೂರಿನ ಅದೇ ಗದ್ದೆಯ ಬಳಿ ಪ್ರತ್ಯಕ್ಷವಾಗಿದ್ದವಂತೆ!

ಆನೆ ಕಾರಿಡಾರ್‌ಗಳ ರಕ್ಷಣೆಗೆ ಕಾನೂನಿನ ಬಲ ತುಂಬಬೇಕು ಹಾಗೂ ಈ ಕಾರಿಡಾರ್‌ಗಳನ್ನು ರಕ್ಷಿತಾರಣ್ಯ ಎಂದೇ ಘೋಷಿಸಬೇಕು. ಯಾವುದೇ ಕಾರಣಕ್ಕೂ ಆನೆಪಥದ ಜಾಗವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಬಾರದು ಎಂಬ ಸಲಹೆಗಳನ್ನು ಕೇಂದ್ರ ಸರ್ಕಾರವೇ ರಚಿಸಿದ್ದ ತಜ್ಞರ ಕಾರ್ಯಪಡೆ ನೀಡಿತ್ತು. ಒಂದುವೇಳೆ ಆನೆ ಕಾರಿಡಾರ್‌ಗಳ ಮೂಲಕ ರಸ್ತೆ ಅಥವಾ ರೈಲು ಮಾರ್ಗ ನಿರ್ಮಾಣ ಮಾಡುವುದು ಅನಿವಾರ್ಯವೇ ಆದಲ್ಲಿ ಆನೆಗಳ ಸಹಜ ಪಯಣಕ್ಕೆ ಅಡಚಣೆ ಆಗದಂತೆ ಎತ್ತರಿಸಿದ ಮಾರ್ಗವನ್ನು ನಿರ್ಮಾಣ ಮಾಡಿಕೊಳ್ಳಬೇಕು ಎನ್ನುವುದು ಈ ಕಾರ್ಯಪಡೆಯ ಪ್ರಮುಖ ಶಿಫಾರಸುಗಳಲ್ಲಿ ಒಂದಾಗಿತ್ತು. ವರದಿ ಸಲ್ಲಿಕೆಯಾಗಿ ಏಳು ವರ್ಷಗಳೇ ಆಗಿದ್ದರೂ ಇದುವರೆಗಿನ ಸರ್ಕಾರಗಳು ಈ ಶಿಫಾರಸುಗಳ ಅನುಷ್ಠಾನದತ್ತ ಕಿಂಚಿತ್ತೂ ಗಮನಹರಿಸಿಲ್ಲ.

### ಸಮಸ್ಯೆಗಳು ಹಲವು

ಸಂಪರ್ಕ ಕಡಿತಗೊಂಡ ಪಥಗಳು ಮಾತ್ರ ಆನೆಗಳ ಸಮಸ್ಯೆಯಲ್ಲ. ಸತತ ಬರಗಾಲದ ಪರಿಣಾಮ ಕಾಡಿನಲ್ಲಿ ಯಥೇಚ್ಛವಾಗಿ ಹುಲ್ಲು ಬೆಳೆಯದೆ ಆಹಾರದ ಸಮಸ್ಯೆಯೂ ಅವುಗಳಿಗೆ ಎದುರಾಗಿದೆ. ಅಲ್ಲದೆ, ಕುಡಿಯಲು ನೀರಿಲ್ಲದೆ ಹತ್ತಾರು ಆನೆಗಳು ಸಾವನ್ನಪ್ಪಿದ ಉದಾಹರಣೆಗಳು ಇವೆ. ಏಪ್ರಿಲ್ 17ರಂದು ಕಾವೇರಿ ವನ್ಯಧಾಮದ

